ಶ್ರೀ ಸಿ. ಬೈರೆಗೌಡ (ವಿೂನಂಗಾರಿಕೆ ಮತ್ತು ಬಂದರು ಸಚಿವರು).—

ಅ) ಹೌದು. ಆದರೆ ಸದರಿ ಸೇವಾ ಸಂಘವು ಸರ್ಕಾರದಿಂದ ಮಾನ್ಯತೆ ಪಡೆದಿರುವುದಿಲ್ಲ.

ಆ) ಹೌದು.

ಇ) ಸಂಘದ ಪ್ರಮುಖ ಬೇಡಿಕೆಗಳು ಈ ಕೆಳಗಿನಂತಿವೆ.

೧) ವಿೂನಂಗಾರಿಕೆ ಇಲಾಖೆಯ ಅನುಸೂಚಿತ ಅದಿಮ ಜಾತಿ ಪಂಗಡ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಗೋಪಾಲರವರನ್ನು ಸರ್ಕಾರಿ ಸೇವೆಯಿಂದ ದಿನಾಂಕ ೧-೫-೧೯೮೧ ರಿಂದ ವಜಾ ಮಾಡಲಾಗಿದ್ದು, ಅವರನ್ನು ಹುದ್ದೆಗೆ ನೇಮಿಸಿಕೊಂಡು ಅವರಿಗೆ ಎಲ್ಲಾ ಸೌಲಭ್ಯವನ್ನು ದಿನಾಂಕ ೧-೫-೧೯೮೧ರಿಂದಲೇ ಕೊಡತಕ್ಕದ್ದು.

೨) ವಿೂನಂಗಾರಿಕೆ ಇಲಾಖೆಯ ಅಧಿಕಾರಿಗಳ ವೇಲೆ ಸಂಘವು ಮಾಡಿದ ಆರೋಪಗಳನ್ನು ಪರಿಶೀಲಿಸಲು ವಿಚಾರಣ ಆಯೋಗವನ್ನು ನೇಮಿಸತಕ್ಕದ್ದು.

೩) ಸಂಘದ ಈ ಮೇಲಿನ ಆರೋಪಗಳು ನಿರಾಧಾರವಾಗಿದ್ದು ಮತ್ತು ಹುರುಳಿಲ್ಲದ್ದಾಗಿರುವುದರಿಂದ ಸಂಘದ ಬೇಡಿಕೆಯನ್ನು ಈಡೇರಿಸಲು ಅಸಾಧ್ಯವಾಗಿದೆ.

ಈ) ಶ್ರೀ ಗೋಪಾಲರವರು ಇವರ ಸೇವೆಯಿಂದ ವಜಾ ಮಾಡಿರುವ ಆದೇಶದ ವೇಲೆ ಸರ್ಕಾರಕ್ಕೆ ವಂನವಿ ಸಲ್ಲಿಸಿದ್ದು, ಸರ್ಕಾರವು ಇವರ ವಂನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ. ೧೮೯ ಎಸ್‌ಎಫ್‌ಇ ೮೫, ದಿನಾಂಕ ೫-೧೧-೧೯೮೪ರಲ್ಲಿ ಅವರ ವಂನವಿಯನ್ನು ತಿರಸ್ಕರಿಸಲಾಯಿತು. ಶ್ರೀ ಗೋಪಾಲರವರು ಸದರಿ ಸರ್ಕಾರದ ಆದೇಶದ ವೇಲೆ ಪುನಃ ವೇಲ್ಮನವಿಯನ್ನು ಪುನರ್ವಿವೆರ್ಶಗಾಗಿ ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸಿದ್ದು, ವಾನ್ಯ ರಾಜ್ಯಪಾಲರಿಗೆ ಸಲ್ಲಿಸಿದ್ದು, ವಾನ್ಯ ರಾಜ್ಯಪಾಲರು ಸದರಿ ವಂನವಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸರ್ಕಾರದ ಹಿಂಬರಹ ಪತ್ರದ ಸಂಖ್ಯೆ ಎಎಹೆಚ್ ೨೨೪ ಎಸ್‌ಎಫ್‌ಇ ೮೪, ದಿನಾಂಕ ೨೭-೮-೧೯೮೫ ರನ್ವಯ ತಿರಸ್ಕರಿಸಲಾಗಿದೆ.

ಬೆಂಗಳೂರಂ ನಗರದಲ್ಲಿ ಚಿತ್ರವಂದಿರಗಳಲ್ಲಿ ಟಿಕೆಟ್ ಸಿಗದಿರುವುದು

೧೨೭೬ ಶ್ರೀಗೋಪಾಲ ಮುಕುಂದ ಕಾನಡೆ (ಶಿರ್ಸಿ).—ವಾನ್ಯ ವಾರ್ತಾ ಯುವಜನ ಸೇವೆ ಕ್ರೀಡೆಗಳ ಹಾಗೂ ಪ್ರವಾಸೋಧ್ಯವಂ ರಾಜ್ಯ ವಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಂ ನಗರದಲ್ಲಿನ ಕೆಲವು ಚಿತ್ರವಂದಿರಗಳಲ್ಲಿ ಹೊಸ ಚಲನಚಿತ್ರಗಳು ನಡೆಯುವಾಗ ಟೀಕೆಟುಗಳು ಸಿಗದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗವನಕ್ಕೆ ಬಂದಿದೆಯೆ ?

ಆ) ಈ ರೀತಿಯ ತೊಂದರೆಗೆ ಕಾರಣಗಳೇನು ?

ಇ) ಈ ಸಂದರ್ಭದಲ್ಲಿ ಚಲನಚಿತ್ರವಂದಿರದ ವ್ಯವಸ್ಥಾಪಕ ವರ್ಗದವರ ವೇಲೆ ಕ್ರವು ತೆಗೆದು ಕೊಳ್ಳಲಾಗುವುದೆ ?

ಶ್ರೀ ಜೀವರಾಜ ಆಳ್ವ (ವಾರ್ತಾ ಯುವಜನ ಕ್ರೀಡೆಗಳ ಹಾಗೂ ಪ್ರವಾಸೋಧ್ಯವ ವಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಚಿತ್ರವಂದಿರದ ವ್ಯವಸ್ಥಾಪಕರ ವೇಲೆ ಸಾರ್ವಜನಿಕರಿಂದ ದೂರು ಬಂದಲ್ಲಿ ಅಂತಹವರ ವೇಲೆ ಸೂಕ್ತ ಕ್ರವು ತೆಗೆದುಕೊಳ್ಳಲಾಗುವುದು.